ಶಿವಮೊಗ್ಗ ನಗರದಲ್ಲಿ ಗೃಹ ಮಂಡಳಿ ನಿರ್ಮಿಸಿರುವ ಮನೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 21(361)

ಸದಸ್ಯರ ಹೆಸರು: ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ)

ಉತ್ತರಿಸುವ ಸಚಿವರು: ಶ್ರೀ ಖಮರುಲ್ ಇಸ್ಲಾಂ(ವಸತಿ ಸಚಿವರು)

ಪ್ರಶ್ನೆ

ಅ) ಶಿವಮೊಗ್ಗ ನಗರದಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ನಿರ್ಮಿಸಿದ ಮನೆಗಳ ಸಂಖ್ಯೆ ಎಷ್ಟು?

ಆ) ಇದರಲ್ಲಿ ಖಾಲಿ ಇರುವ ಮನೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಮನೆಗಳ ವಿವರ ನೀಡುವುದು?

ಇ) ಖಾಲಿ ಇರುವ ನಿವೇಶನಗಳ ಸಂಖ್ಯೆ ಎಷ್ಟು; ಹಂಚಿಕೆಯಾದ ನಿವೇಶನಗಳ ಸಂಖ್ಯೆ ಎಷ್ಟು (ವಿವರ ನೀಡುವುದು)?

ಉತ್ತರ

ಅ) 2297.

ಆ) ಒಂದು ಎಲ್.ಐ.ಜಿ. ಮನೆ ಖಾಲಿ ಇರುತ್ತದೆ.

(ಎಲ್.ಐ.ಜಿ. ಮನೆ ಸಂಖ್ಯೆ 153, ಕಲ್ಲಹಳ್ಳಿ 2ನೇ ಹಂತ)

ಇ) ಖಾಲಿ ಇರುವ ನಿವೇಶನ ಸಂಖ್ಯೆ: 34

ಹಂಚಿಕೆಯಾದ ಒಟ್ಟು ನಿವೇಶನಗಳ ಸಂಖ್ಯೆ:253

ಬಡಾವಣೆಯ ಹೆಸರು	ಹಂಚಿಕೆ ಮಾಡಿರುವ ನಿವೇಶನಗಳು	ಖಾಲಿಯಿರುವ ನಿವೇಶನಗಳು
ಕಲ್ಲಹಳ್ಳಿ 1ನೇ ಹಂತ ಶಿವಮೊಗ್ಗ	63	-
ಕಲ್ಲಹಳ್ಳಿ 2ನೇ ಹಂತ ಶಿವಮೊಗ್ಗ	156	12
ಗೋಪಾಳ 1ನೇ ಹಂತ ಶಿವಮೊಗ್ಗ	23	07

ಗೋಪಾಳ 2ನೇ ಹಂತ ಶಿವಮೊಗ್ಗ	07	13
ಗೋಪಾಳ 3ನೇ ಹಂತ ಶಿವಮೊಗ್ಗ	04	02
ಒಟ್ಟು	253	34

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಉತ್ತರವೇನೋ ಒದಗಿಸಿದ್ದಾರೆ. ಆದರೆ ಹಿಂದೆ ಮನೆಗಳನ್ನು ಹಂಚಿಕೆ ಮಾಡುವಂತಹ ಕಾಲದಲ್ಲಿ ಕಡಿಮೆ ದರದಲ್ಲಿ ಕೊಟ್ಟಿದ್ದರು. ಈಗ ತಕ್ಷಣ ಅದನ್ನು ಮೂರು ಪಟ್ಟು ಜಾಸ್ತಿ ಮಾಡಿದ್ದಾರೆ. ಹಿಂದೆ ಕೊಟ್ಟಿರತಕ್ಕಂಥ ದರಕ್ಕೂ ಈಗಿನ ದರಕ್ಕೂ ಬಹಳ ವ್ಯತ್ಯಾಸವಾಗುತ್ತಿದೆ. ಅದನ್ನು ಕಡಿಮೆ ಮಾಡಿ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಜೊತೆಗೆ ಎರಡು ಮನೆ ಖಾಲಿ ಇದೆ. ಇನ್ನೂ ಕೆಲವು ಭಾಗದಲ್ಲಿ 34 ಮನೆಗಳು ಖಾಲಿ ಇವೆ. ಹಿಂದೆ ಮನೆಗಳನ್ನು ಕೊಟ್ಟಿರುವ ಕಾಲದಲ್ಲಿ ಬೇರೆ ಭಾಗದಲ್ಲಿರುವವರಿಗೆ ಕೊಟ್ಟಿದ್ದೀರಿ. ,ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿರುವವರಿಗೆ ಕೊಟ್ಟಿಲ್ಲ. ಬೆಂಗಳೂರು ಇಂತಹ ಬೇರೆ ಬೇರೆ ವ್ಯಾಪ್ತಿಯಲ್ಲಿ ಇರುವವರಿಗೆ ಕೊಟ್ಟಿದ್ದೀರಿ. ನನ್ನ ಸಲಹೆ ಏನೆಂದರೆ ದಯವಿಟ್ಟು ಆ ಕ್ಷೇತ್ರದಲ್ಲಿರತಕ್ಕಂಥವರಿಗೆ ಮತ್ತು ಅಲ್ಲಿಯೇ ವಾಸ ಮಾಡುವಂತಹವರಿಗೆ ಮನೆಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. ಕೆಲವು ಅರ್ಜಿದಾರರು ಶಿವಮೊಗ್ಗ ಪಟ್ಟಣದಲ್ಲಿ ಮನೆ ತೆಗೆದುಕೊಂಡು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ, ಅವರು ಇಲ್ಲಿನ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದಾರೆ, ಇನ್ನು ಕೆಲವರು ಮಾರಾಟ ಮಾಡಿಕೊಂಡು ಹೋಗುತ್ತಿದ್ದಾರೆ. ಇದನ್ನು ಸರಿಪಡಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ನಗರದ ಕಲ್ಲಳ್ಳಿ ಫೇಸ್-(1) ಮತ್ತು ಫೇಸ್-(2)ರಲ್ಲಿ 2297 ಮನೆಗಳನ್ನು ಕಟ್ಟಿದ್ದು ಅದರಲ್ಲಿ ಎಲ್.ಐ.ಜಿ. ಮನೆ ಒಂದು ಬಿಟ್ಟು ಇನ್ನುಳಿದ ಎಲ್ಲಾ ಮನೆಗಳು ಅಲಾಟ್ ಆಗಿವೆ. ಮತ್ತೆ 287 ಸೈಟ್‌ಗಳಲ್ಲಿ 253 ಸೈಟ್‌ಗಳು ಅಲಾಟ್ ಆಗಿವೆ. ಇನ್ನುಳಿದ 34 ಸೈಟ್‌ಗಳಲ್ಲಿ 12 ಸೈಟ್‌ಗಳು ವಾಣಿಜ್ಯ ಸೈಟ್‌ಗಳು, ಇನ್ನುಳಿದ 22 ಸೈಟ್‌ಗಳು ಕಾರ್ನರ್ ಸೈಟ್ಸ್. ಕಾರ್ನರ್ ಸೈಟ್‌ಗಳನ್ನು ಆಕ್ಷನ್ ಮಾಡಲೇಬೇಕು. ಒಂದೇ ಒಂದು ಮನೆ ಖಾಲಿ ಇದೆ, ಅದನ್ನೂ ಸಹ ಅಲಾಟ್ ಮಾಡುತ್ತೇವೆ. ಮತ್ತು ದರ ಮೂರು ಪಟ್ಟು ಜಾಸ್ತಿ ಆಗಿಲ್ಲ. ನಾನು ಪ್ರಾವಿಜನಲ್ ಕಾಸ್ಟ್ ತಮಗೆ ಹೇಳುತ್ತೇನೆ, ಫಸ್ಟ್ ಫೇಸ್ 1993ರಲ್ಲಿ ಪ್ರಾರಂಭವಾಗಿದೆ. 195 ಮನೆಗಳು. ಅದು 40.11 ಲಕ್ಷ ರೂ. ಪ್ರಾವಿಜನಲ್ ಕಾಸ್ಟ್ ಮಾಡಿ ಎಸ್ಟಿಮೇಟ್

ಮಾಡಿದ್ದಾರೆ. ಅದು ಪೂರ್ಣವಾದ ಮೇಲೆ 59.38 ಲಕ್ಷ ರೂ. ಆಗಿದೆ. ಕೇವಲ 16-17 ಲಕ್ಷ ರೂ. ಮಾತ್ರ ಜಾಸ್ತಿಯಾಗಿದೆ. ಬಹಳ ವರ್ಷಗಳ ನಂತರ. ಮತ್ತೆ ಎಲ್ಲಾ ಮನೆಗಳು ಅಲಾಟ್ ಆಗಿದೆ. ಬಹಳ ಜನ ಹಣ ಪಾವತಿ ಮಾಡಿದ್ದಾರೆ. ಈಗ 100 ಮನೆಗಳಲ್ಲಿ ಶಿವಮೊಗ್ಗ ಮತ್ತು ದಾವಣಗೆರೆಯಲ್ಲಿ ನಾನು ಹೊಸ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇನೆ ಇದಕ್ಕೆ ಬಹಳ ಡಿಮ್ಯಾಂಡ್ ಇದೆ. ಡಿಮ್ಯಾಂಡ್ ಪ್ರಕಾರ ಮನೆ ಮತ್ತು ನಿವೇಶನ ಕೊಡುತ್ತೇವೆ.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಮನೆ ಅಲಾಟ್‌ಮೆಂಟ್ ಮಾಡಿದ್ದಾರೆ, ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ನಮ್ಮ ನಗರಕ್ಕೆ ಸಂಬಂಧಪಟ್ಟವರಿಗೆ ಮಾತ್ರ ಅಲಾಟ್‌ಮೆಂಟ್ ಮಾಡುವ ಬಗ್ಗೆ ಕಾಳಜಿ ವಹಿಸಬೇಕು. ಜೊತೆಗೆ ಆ ಮನೆಗಳನ್ನು ನಗರಸಭೆ ವ್ಯಾಪ್ತಿಗೆ ಸೇರಿಸಿ ಖಾತಾ ಮಾಡಿ ಕೊಟ್ಟರೆ ನಮ್ಮ ನಗರಸಭೆಗೆ ಆದಾಯ ಬರುತ್ತದೆ. ಈಗ ನಗರಸಭೆಗೆ ಬರುವ ಆದಾಯ ಸಹ ನಿಂತಿದೆ. ಅಲ್ಲಿನ ಮನೆಗಳಿಗೆ ನಗರಸಭೆ ವತಿಯಿಂದ ಎಲ್ಲಾ ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಆದ್ದರಿಂದ ಆದಷ್ಟು ಬೇಗ ನಗರ ಸಭೆಗೆ ವಹಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೇ, ಅದನ್ನು ನಾನು ನೋಡುತ್ತೇನೆ. ಶಿವಮೊಗ್ಗ ನಗರ ವಾಸಿಗಳಿಗೆ ಹಂಚಿಕೆ ಮಾಡಿದ್ದಾರೋ ಅಥವಾ ಬೇರೆಯವರಿಗೆ ಹಂಚಿಕೆ ಮಾಡಿದ್ದಾರೋ ಎಂಬುದನ್ನು ನೋಡುತ್ತೇನೆ.

ಬೆಂಗಳೂರು ನಗರದಲ್ಲಿರುವ ಖಾಸಗಿ ಶಾಲಾ-ಕಾಲೇಜುಗಳಿಗೆ ಪ್ರವೇಶ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 22(556)

ಸದಸ್ಯರ ಹೆಸರು: ಶ್ರೀ ಸುರೇಶ್ ಕುಮಾರ್ ಎಸ್.(ರಾಜಾಜಿನಗರ)

ಉತ್ತರಿಸುವ ಸಚಿವರು: ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

ಅ. ಬೆಂಗಳೂರು ನಗರದಲ್ಲಿರುವ ಖಾಸಗಿ ಶಾಲೆ ಕಾಲೇಜುಗಳಲ್ಲಿ ಪ್ರವೇಶ ಪಡೆಯುವುದಕ್ಕೆ ವಿದ್ಯಾರ್ಥಿಗಳು ಹಾಗೂ ಪೋಷಕರು ಪಡುತ್ತಿರುವ ಬವಣೆ ಸರ್ಕಾರದ ಗಮನಕ್ಕೆ ಬಂದಿದೆಯೇ?